# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

‘ವಿಜ್ಞಾನಭವನ’, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 010
ದೂರವಾಣಿ : 080–26718939 ಇ–ಮೇಲ್ : krvp.info@gmail.com ವೆಬ್‌ಸೈಟ್ : www.krvp.org

## ಕರಾವಿಪದ ಕಾರ್ಯಕಾರಿ ಸಮಿತಿಯ ತ್ರೈವಾರ್ಷಿಕ ಚುನಾವಣಾ ವೇಳಾಪಟ್ಟಿ – 2016
## (ಪರಿಷ್ಕೃತ)

ದಿನಾಂಕ : 05.10.2016

| ಕ್ರಮ ಸಂಖ್ಯೆ | ವಿವರ | ದಿನಾಂಕ |
|---|---|---|
| 1. | ನಾಮಪತ್ರಗಳ ನೀಡಿಕೆ ಮತ್ತು ಸ್ವೀಕಾರದ ಪ್ರಾರಂಭ (ನಾಮಪತ್ರಗಳ ನಮೂನೆಯನ್ನು ಜಾಲತಾಣದಿಂದ ಸಹ ಡೌನಲೋಡ್ (Download) ಮಾಡಿಕೊಳ್ಳಬಹುದು). | 07.10.2016* ಶುಕ್ರವಾರ |
| 2. | ನಾಮಪತ್ರವನ್ನು ಕರಾವಿಪ ಚುನಾವಣಾಧಿಕಾರಿಗೆ ಅಭ್ಯರ್ಥಿ ಅಥವಾ ಸೂಚಕರು ಅಥವಾ ಅನುಮೋದಕರು ಖುದ್ದಾಗಿ / ಅಂಚೆ ಮೂಲಕ ಸಲ್ಲಿಸಲು ಕೊನೆಯ ದಿನಾಂಕ<br><br>**_*ಹಿಂದೆ ದಿನಾಂಕ 03.09.2016 ರಂದು ಪ್ರಕಟಿಸಿದ್ದ ಚುನಾವಣಾ ವೇಳಾಪಟ್ಟಿಯಲ್ಲಿ ಈ ಎರಡು ದಿನಾಂಕಗಳನ್ನು ಅನುಕ್ರಮವಾಗಿ ದಿನಾಂಕ 06.09.2016 ಮತ್ತು 16.09.2016 ಎಂದು ನಮೂದಿಸಲಾಗಿತ್ತು. ನಂತರದ ಬೆಳವಣಿಗೆಯಲ್ಲಿ ಬೆಂಗಳೂರಿನ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಲಯವು ಮೊಕದ್ದಮೆ ಸಂಖ್ಯೆ 6417 / 2016 ರಲ್ಲಿ ದಿನಾಂಕ 07.09.2016 ರಂದು ಚುನಾವಣಾ ಪ್ರಕ್ರಿಯೆಗೆ ತಡೆಯಾಜ್ಞೆ ಜಾರಿ ಮಾಡಿದ ಹಿನ್ನೆಲೆಯಲ್ಲಿ, ಪ್ರಕ್ರಿಯೆಯನ್ನು ಸದರಿ ದಿನಾಂಕದಿಂದ ಸ್ಥಗಿತಗೊಳಿಸಲಾಯಿತು. ದಿನಾಂಕ 03.10.2016 ರಂದು ಅರ್ಜಿಯನ್ನು (ಮೊಕದ್ದಮೆ) ವಜಾಗೊಳಿಸಿ ತಡೆಯಾಜ್ಞೆಯನ್ನು ತೆರವುಗೊಳಿಸಿರುವುದರಿಂದ ಚುನಾವಣಾ ಪ್ರಕ್ರಿಯೆಗೆ ಮುಂದುವರಿದ ಚಾಲನೆ ನೀಡಿ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕವನ್ನು ಪ್ರಸ್ತುತ 21.10.2016 ಎಂದು ನಮೂದಿಸಿ ಅದರ ಆಧಾರ ನಂತರದ ವೇಳಾಪಟ್ಟಿಯನ್ನು (ಪರಿಷ್ಕೃತ) ಈ ಮೂಲಕ ಪ್ರಕಟಿಸಲಾಗಿದೆ._** | 21.10.2016* ಶುಕ್ರವಾರ |
| 3. | ನಾಮಪತ್ರಗಳ ಪರಿಶೀಲನೆ ಮತ್ತು ಅರ್ಹ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | 25.10.2016 ಮಂಗಳವಾರ |
| 4. | ನಾಮಪತ್ರಗಳನ್ನು ಅಭ್ಯರ್ಥಿಯೇ ಖುದ್ದಾಗಿ/ಚುನಾವಣಾ ಏಜೆಂಟ್/ಇಮೇಲ್ ಮೂಲಕ ಮಾತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ (ಸಂಜೆ 5.30 ರೊಳಗೆ) | 28.10.2016 ಶುಕ್ರವಾರ |
| 5. | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕ ಹಾಗೂ ಜಾಲತಾಣದಲ್ಲಿ ಪ್ರಕಟಿಸುವ ದಿನಾಂಕ | 03.11.2016 ಗುರುವಾರ |
| 6. | ಮತ ಪತ್ರಗಳನ್ನು ಮತದಾರರಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸುವ ಕೊನೆಯ ದಿನಾಂಕ | 21.11.2016 ಸೋಮವಾರ |
| 7. | ಮತದಾರರಿಂದ ಮತಪತ್ರಗಳು ರಿಜಿಸ್ಟರ್ಡ್ ಅಂಚೆ ಮೂಲಕ ಚುನಾವಣಾಧಿಕಾರಿಗಳಿಗೆ ತಲುಪಲು ಕೊನೆಯ ದಿನಾಂಕ (ಸಂಜೆ 5.30 ರೊಳಗೆ) | 14.12.2016 ಬುಧವಾರ |
| 8. | ಮತಪತ್ರಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ.<br>– ಮತಪತ್ರಗಳ ಎಣಿಕೆ : ಬೆಳಿಗ್ಗೆ 9.00 ಗಂಟೆಗೆ<br>– ಫಲಿತಾಂಶ ಪ್ರಕಟಣೆ : ಸಂಜೆ 6.00 ಗಂಟೆಗೆ. | 17.12.2016 ಶನಿವಾರ |

***ವಿ.ಸೂ : ಈ ಹಿಂದೆ ದಿನಾಂಕ 03.09.2016ರಂದು ಪ್ರಕಟಿಸಲಾಗಿದ್ದ ವೇಳಾಪಟ್ಟಿಗೆ ಪ್ರತಿಕ್ರಿಯಿಸಿ ನಾಮಪತ್ರ ಸಲ್ಲಿಸಿದ ಉಮೇದುವಾರರು ಪುನ: ಅದನ್ನು ಸಲ್ಲಿಸುವ ಅಗತ್ಯವಿಲ್ಲ.***

M.R. Nandan

(ಎಂ. ಆರ್. ನಂದನ್)
ಚುನಾವಣಾಧಿಕಾರಿ
ಕರಾವಿಪ ತ್ರೈವಾರ್ಷಿಕ ಚುನಾವಣೆ – 2016
ಮೊ : 9449620390
email: nandan.chakrapani@gmail.com

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070.
ದೂರವಾಣಿ: 26718939; ಇ–ಮೇಲ್: krvp.info@gmail.com; ವೆಬ್‌ಸೈಟ್: www.krvp.org

## ತ್ರೈವಾರ್ಷಿಕ ಕಾರ್ಯಕಾರಿ ಸಮಿತಿ ಚುನಾವಣೆ – 2016

# ಚುನಾವಣಾ ನೀತಿ ಸಂಹಿತೆ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ 2016–2019ರ ಅವಧಿಗೆ ನಡೆಯಲಿರುವ ಚುನಾವಣೆಗೆ ಸ್ಪರ್ಧಿಸಲಿರುವ ಎಲ್ಲಾ ಉಮೇದುವಾರರು ಚುನಾವಣಾ ನೀತಿಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿ ಸೂಚಿಸಲಾಗಿದೆ.

1. ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಉಮೇದುವಾರರು ಪರಿಷತ್ತಿಗೆ ಸಂಬಂಧಪಟ್ಟಂಥ ಯಾವುದೇ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸುವುದು ನೀತಿ ಸಂಹಿತೆಯ ಉಲ್ಲಂಘನೆಯಾಗುತ್ತದೆ.
2. ಪರಿಷತ್ತು ಮುದ್ರಿಸುವ ಆಹ್ವಾನ ಪತ್ರಿಕೆಯಲ್ಲಿಯೇ ಆಗಲಿ, ಅಥವಾ ಕರಪತ್ರದಲ್ಲಿ ಅಥವಾ ಪರಿಷತ್ತು ಮುದ್ರಿಸಬಹುದಾದ ಬೇರಾವುದೇ ಪತ್ರದಲ್ಲಿ ಯಾವುದೇ ಕಾರಣಕ್ಕೂ ಉಮೇದುವಾರರ ಹೆಸರಾಗಲಿ ಅಥವಾ ಸಹಿಯಾಗಲಿ ಕಂಡುಬರತಕ್ಕದಲ್ಲ.
3. ಉಮೇದುವಾರರು ಯಾವ ಮತದಾರರಿಗೂ ನಗದು ರೂಪದಲ್ಲಾಗಲೀ ಅಥವಾ ಯಾವುದೇ ಪದಾರ್ಥದ ರೂಪದಲ್ಲಾಗಲೀ ಉಡುಗೊರೆಯನ್ನು ಕೊಡತಕ್ಕದ್ದಲ್ಲ ಅಥವಾ ಯಾವುದೇ ಆಮಿಷವನ್ನಾಗಲೀ ಅಥವಾ ಪ್ರಲೋಭನೆಯನ್ನಾಗಲೀ ಒಡ್ಡತಕ್ಕದ್ದಲ್ಲ.
4. ಯಾವುದೇ ಕಾರಣಕ್ಕೂ ಉಮೇದುವಾರರು ಪರಿಷತ್ತಿನ ಯಾವ ಅಧಿಕಾರಿಯನ್ನೇ ಆಗಲಿ ಅಥವಾ ಉದ್ಯೋಗಿಯನ್ನೇ ಆಗಲಿ ಭೇಟಿಯಾಗತಕ್ಕದ್ದಲ್ಲ.
5. ಯಾವುದೇ ದೂರು ಅಥವಾ ಕುಂದು ಕೊರತೆ ಇದ್ದಲ್ಲಿ ಚುನಾವಣಾ ಅಧಿಕಾರಿಯನ್ನಷ್ಟೇ ದೂರವಾಣಿ ಮುಖೇನ ಸಂಪರ್ಕಿಸಬೇಕು ಹಾಗೂ ದೂರನ್ನು ಲಿಖಿತ ರೂಪದಲ್ಲಿ ಇ–ಮೇಲ್ ಮೂಲಕವಾಗಲೀ ಅಥವಾ ಪತ್ರದ ಮೂಲಕವಾಗಲೀ ಸಲ್ಲಿಸಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರವೇ ಪೂರ್ವಾನುಮತಿಯ ಮೂಲಕ ಸಂದರ್ಶನವು ಸಾಧ್ಯ.
6. ಯಾವುದೇ ಕಾರಣಕ್ಕೂ ಉಮೇದುವಾರರು ಸೌಜನ್ಯತೆಯ ಎಲ್ಲೆಯನ್ನು ಮೀರುವಂತಿಲ್ಲ. ದುರ್ಭಾಷೆಯ ಬಳಕೆ ಅಥವಾ ಆಕ್ರಮಣಕಾರಿ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ಮೇಲೆ ಸೂಚಿಸಿರುವ ಯಾವುದೇ ನೀತಿ ನಿಯಮವನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಉಮೇದುವಾರರ ಉಮೇದುವಾರಿಕೆಯನ್ನು ಆ ಕ್ಷಣದಲ್ಲಿಯೇ ರದ್ದುಪಡಿಸಲಾಗುವುದು ಅಥವಾ ಚುನಾವಣಾ ಫಲಿತಾಂಶವನ್ನು ತಡೆಹಿಡಿಯಲಾಗುವುದು ಅಥವಾ ರದ್ದುಪಡಿಸಲಾಗುವುದು.

ಈ ನೀತಿ ಸಂಹಿತೆಯು ದಿನಾಂಕ 17–12–2016ರ ಸಂಜೆ 5.30ರ ವರೆಗೆ ಜಾರಿಯಲ್ಲಿರುತ್ತದೆ.

# ಮುಚ್ಚಳಿಕೆ

........................................................................................ *ಆದ ನಾನು* ................................... *ಸ್ಥಾನಕ್ಕೆ ಸ್ಪರ್ಧಿಸಿದ್ದೇನೆ. ನೀತಿ ಸಂಹಿತೆಯ ಎಲ್ಲಾ 6 ನಿಯಮಗಳನ್ನು ಪೂರ್ಣವಾಗಿ ಓದಿ ಅರ್ಥ ಮಾಡಿಕೊಂಡಿದ್ದೇನೆ ಹಾಗೂ ಎಲ್ಲಾ 6 ನಿಯಮಗಳಿಗೆ ನಾನು ಬದ್ಧನಾಗಿದ್ದೇನೆ ಎಂದು ಈ ಮೂಲಕ ಘೋಷಿಸುತ್ತೇನೆ. ಯಾವುದೇ ನಿಯಮವನ್ನು ನಾನು ಉಲ್ಲಂಘಿಸಿದಲ್ಲಿ ಆಗುವ ಆಗು–ಹೋಗುಗಳಿಗೆ ನಾನು ಸಂಪೂರ್ಣವಾಗಿ ಜವಾಬ್ದಾರನಾಗಿರುತ್ತೇನೆ.*

ಸಹಿ

ಹೆಸರು :

ಮತದಾರರ ಸಂಖ್ಯೆ :

ಮತದಾರರ ಪಟ್ಟಿಯ ಪುಟ :

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070.
ದೂರವಾಣಿ: 26718939; ಇ–ಮೇಲ್: krvp.info@gmail.com; ವೆಬ್‌ಸೈಟ್: www.krvp.org


## ಸೂಚನೆಗಳು

ಮೇಲ್ಕಂಡ ಚುನಾವಣೆಯನ್ನು ಈಗಾಗಲೇ ಪ್ರಕಟಗೊಂಡಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಈ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಂಶಗಳತ್ತ ಎಲ್ಲಾ ಮತದಾರ ಸದಸ್ಯರ ಗಮನವನ್ನು ಸೆಳೆಯಲಾಗುತ್ತಿದೆ.

1. ರಾಜ್ಯದಲ್ಲಿನ ನಾಲ್ಕು ವಿಭಾಗಗಳಿಂದಲೂ (ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾವಿ) ತಲಾ ಆರು (06) ಜನರಂತೆ ಆಯ್ಕೆಯಾಗಬೇಕು. ಕರಾವಿಪದ ಪರಿಷ್ಕೃತ ಬೈಲಾ ಪ್ರಕಾರ {6.4.1(i)} ಕಾರ್ಯಕಾರಿ ಸಮಿತಿ ಸದಸ್ಯರ 24 ಸ್ಥಾನಗಳಲ್ಲಿ ವಿಭಾಗದ ಸರದಿಯ ಪ್ರಕಾರ ಒಂದು (01) ಸ್ಥಾನವನ್ನು ಮಹಿಳೆಗೆ ಮತ್ತು ಒಂದು ಸ್ಥಾನವನ್ನು (01) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿದೆ. 2016–19 ರ ಅವಧಿಗೆ ಈಗ ನಡೆಯಲಿರುವ ಚುನಾವಣೆಯಲ್ಲಿ ಮೈಸೂರು ವಿಭಾಗದಲ್ಲಿ ಒಂದು (01) ಸ್ಥಾನವನ್ನು ಮಹಿಳೆಗೆ ಮತ್ತು ಬೆಂಗಳೂರು ವಿಭಾಗದಲ್ಲಿ ಒಂದು (01) ಸ್ಥಾನವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿದೆ. ಆದ್ದರಿಂದ ಸಾಮಾನ್ಯ ವರ್ಗದಿಂದ ಈ ವಿಭಾಗಗಳಲ್ಲಿ ಐದು (05) ಅಭ್ಯರ್ಥಿಗಳನ್ನು ಮಾತ್ರ ಚುನಾಯಿಸಬೇಕು.

2. ಗುರುತು ಮಾಡಿರುವ ಮತಪತ್ರವನ್ನು ಚುನಾವಣಾಧಿಕಾರಿಗೆ ತಲುಪಿಸಲು ಸಾಕಷ್ಟು ಸಮಯ ನೀಡಿರುವುದರಿಂದ ಕೊನೆಯ ತಾರೀಖಿನ ಒಳಗೆ ಅವರಿಗೆ ತಪ್ಪದೆ ತಲುಪುವಂತೆ ಮತದಾರರು ಕ್ರಮ ತೆಗೆದುಕೊಳ್ಳಬೇಕು.

3. ಒಂದು ವಿಭಾಗದಿಂದ ಆರು ಅಥವಾ ಅದಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿ ಸ್ಪರ್ಧಿಗಳಿದ್ದಲ್ಲಿ ಅವರೆಲ್ಲರನ್ನೂ ವಿಜಯಿಗಳೆಂದು ಪ್ರಕಟಿಸಲಾಗುವುದು. ಆರಕ್ಕಿಂತಲು ಕಡಿಮೆಯ ಸಂಖ್ಯೆಯಲ್ಲಿ ಸ್ಪರ್ಧಿಗಳಿದ್ದ ಸಂದರ್ಭದಲ್ಲಿ ಉಳಿದ ಸದಸ್ಯರನ್ನು ಆ ವಿಭಾಗದಿಂದ ನಾಮಕರಣ ಮಾಡಬಹುದು. ಮೀಸಲಾತಿ ಇರುವ ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಮೀಸಲಾತಿ ವಿಭಾಗದಲ್ಲಿ ಕನಿಷ್ಠ ಎರಡು (02) ಮತ್ತು ಸಾಮಾನ್ಯ ವರ್ಗದಲ್ಲಿ ಕನಿಷ್ಠ ಆರು (06) ಅಭ್ಯರ್ಥಿಗಳಿದ್ದರೆ ಮಾತ್ರ ಆ ವಿಭಾಗದಲ್ಲಿ ಚುನಾವಣೆ ನಡೆಯುತ್ತದೆ.

4. ಒಬ್ಬ ಮತದಾರ ತನ್ನ ವಿಭಾಗದ ಆರು ಅಥವಾ ಅದಕ್ಕಿಂತಲೂ ಕಡಿಮೆ ಸಂಖ್ಯೆಯ ಸ್ಪರ್ಧಿಗಳಿಗೆ ಮತ ನೀಡಬಹುದು. ಆರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಸ್ಪರ್ಧಿಗಳ ಪರವಾಗಿ ಮತ ಚಲಾಯಿಸಿದಲ್ಲಿ ಆ ಮತ ಪತ್ರವನ್ನು ತಿರಸ್ಕರಿಸಲಾಗುವುದು.

5. ಸ್ಪರ್ಧಿಗಳು ಮತದಾರರು ಗಳಿಸಿರುವ ಮತಗಳ ಸಂಖ್ಯೆಯನ್ನಾಧರಿಸಿ ಆವರೋಹಣ ಕ್ರಮದಲ್ಲಿ ಮೊದಲ ಆರು (06) ಸ್ಪರ್ಧಿಗಳನ್ನು ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ವಿಜಯಿಗಳೆಂದು ಪ್ರಕಟಿಸಲಾಗುವುದು. ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಸಾಮಾನ್ಯ ವರ್ಗದ ಮೊದಲ ಐದು (05) ಸ್ಪರ್ಧಿಗಳನ್ನು ವಿಜಯಿಗಳೆಂದು ಪ್ರಕಟಿಸಲಾಗುವುದು. ಬೆಂಗಳೂರು ವಿಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಪಡೆದ ಮತಗಳನ್ನು ಅವರೋಹಣ ಕ್ರಮದಲ್ಲಿ ಪರಿಗಣಿಸಿ ಅತ್ಯಧಿಕ ಮತಗಳನ್ನು ಗಳಿಸಿದ **ಒಬ್ಬರು (01)** ಸ್ಪರ್ಧಿಯನ್ನು ವಿಜಯಿಯೆಂದು ಪ್ರಕಟಿಸಲಾಗುವುದು. ಹಾಗೆಯೇ ಮೈಸೂರು ವಿಭಾಗದಲ್ಲಿ ಅತ್ಯಧಿಕ ಮತಗಳನ್ನು ಗಳಿಸಿದ **ಒಬ್ಬರು (01)** ಸ್ಪರ್ಧಿಯನ್ನು ವಿಜಯಿಯೆಂದು ಪ್ರಕಟಿಸಲಾಗುವುದು.

6. ಮತದಾರರು ಮತಪತಗಳಿರುವ ಲಕೋಟೆಗಳನ್ನು ಅಂಚೆ ಇಲಾಖೆಯಿಂದ **'ತಾವೇ'** ಪಡೆದು ಮತದಾನ ಪ್ರಕಿಯೆ ಮುಗಿದ ನಂತರ ನಿಗದಿತ ಸಮಯದೊಳಗೆ ಚುನಾವಣಾಧಿಕಾರಿಗೆ ತಲುಪುವಂತೆ ಖುದ್ದಾಗಿ ರವಾನೆ ಮಾಡಬೇಕೆಂದು ಕೋರಲಾಗಿದೆ.

M.R.N.

(ಎಂ.ಆರ್.ನಂದನ್)

ಚುನಾವಣಾಧಿಕಾರಿ

ಕರಾವಿಪ ತ್ರೈವಾರ್ಷಿಕ ಚುನಾವಣೆ–2016